ನಳಿನಿಗೂ ಭರ್ತಿ ಹತ್ತು ವರ್ಷಗಳ ವ್ಯತ್ಯಾಸ. ನೆತ್ತಿಗೂದಲು ಆಗಲೇ ಹಿಂದೆ ಹಿಂದೆ ಸರಿಯುತ್ತಿರುವ ಅನಂತನಿಗೆ ಹುಡುಗಿಯನ್ನು ನೋಡಲು ಹೋಗುವುದಕ್ಕೂ ಕೂಡಾ ಸಣ್ಣ ಹಿಂಜರಿತ. 'ಆದರೆ ಆಯ್ತು, ಹೋದರೆ ಹೋಯ್ತು' ಎನ್ನುವ ಧೈರ್ಯ ಆವಾಹಿಸಿಕೊಂಡು ಹುಡುಗಿ ನೋಡಲು ಹೋದರೆ ಈ ಸಂಬಂಧ ಪಕ್ಕಾ ಆಗಿಬಿಟ್ಟಿತು. ಹತ್ತಾರು ಗುಮಾನಿ ಅನಂತನಿಗೆ. ನಳಿನಿ ಲಕ್ಷಣವಾಗಿರುವ ಹುಡುಗಿ. ತನ್ನಂತವನನ್ನು ಒಪ್ಪಿ ಹಳ್ಳಿ ಜೀವನಕ್ಕೆ ಸಿದ್ಧಳಾಗಿದ್ದಾಳೆ ಅಂದರೆ ಒಳಗುಟ್ಟು ಇನ್ನೇನಾದರೂ ಇರಬಹುದಾ? ಆ ಒಳಗುಟ್ಟಿನ ಕುರಿತು ಅವನು ಕಲ್ಪನೆಯ ಕುದುರೆ ಓಡಿಸಿದ್ದೇ ಓಡಿಸಿದ್ದು. ಎದೆಬಡಿತ ಹೆಚ್ಚಿಸಿಕೊಂಡಿದ್ದೇ ಹೆಚ್ಚಿಸಿಕೊಂಡಿದ್ದು. ದೇವರ ಮೇಲೆ ಭಾರ ಹಾಕಿ ಅನ್ನುವಂತೆ ಅನಂತ ಈ ಮದುವೆಗೆ ಒಪ್ಪಿಕೊಂಡ ಅನ್ನುವುದು ಅವನಿಗಷ್ಟೇ ಗೊತ್ತಿರುವ ಸತ್ಯ. ಹುಡುಗಿಯ ಅಪ್ಪ ನೇರವಾಗಿ ಹೇಳಿದ್ದರು,

"ಸಣ್ಣಮಟ್ಟದಲ್ಲಿ ಮನೆಬಾಗ್ಲಲ್ಲಿ ಒಂದು ಮದುವೆ ಮಾಡ್ಕೊಡ್ತೀವಿ. ನಿಮಗೇನಾದ್ರೂ ಹೆಚ್ಚಿನ ನಿರೀಕ್ಷೆ ಇದ್ರೆ ನಮ್ಕೈಲಿ ಸಾಧ್ಯಿಲ್ಲ. ಈಗ್ಲೇ ಹೇಳ್ಬಿಟ್ಟಿದೀನಿ..."

ಅನಂತ ಕೋಲೇಬಸವನ ಹಾಗೆ ತಲೆ ಹಾಕಿದ್ದ. ಸುಮುಖವಾಗಿ ಮದುವೆ ಮುಗಿದು ನಳಿನಿ ಮನೆ ತುಂಬುವವರೆಗೆ ಅವನ ತಲೆ ಕೊರೆಯುತ್ತಿದ್ದ ಕುಟ್ಟೆಹುಳು ಕೊರೆಯುತ್ತಲೇ ಇತ್ತು. ಅವನು ಅವಳಿಗೆ ಕೇಳಿದ ಮೊದಲ ಪ್ರಶ್ನೆ ಕೂಡಾ ಇದೇ,

"ನನ್ನ ಮದುವೆಯಾಗೋಕೆ ಹೇಗೆ ಒಪ್ಕೊಂಡೆ ನೀನು? ಈಗ್ಲೂ ನಂಗೆ ನಂಬೋಕಾಗ್ತಿಲ್ಲ..."

ಹುಡುಗಿ ಈ ಮಾತನ್ನು ಗಂಭೀರವಾಗಿ ಪರಿಗಣಿಸಿರಲಿಲ್ಲ. ಗಂಡ ತಮಾಷೆಗೆ ಈ ಮಾತು ಕೇಳುತ್ತಿದ್ದಾನೆಂದು ಅವಳ ಅನಿಸಿಕೆ. ಅದನ್ನೇ ಬಾಯ್ಬಿಟ್ಟು ಹೇಳಿದ್ದಳು ಕೂಡಾ,

"ತಮಾಷಿ ಮಾಡ್ಬೇಡಿ ನೀವು..."

★★★

ಮನೆಗೆ ಗೃಹಿಣಿಯೊಬ್ಬಳ ಆಗಮನದೊಂದಿಗೆ ಮನೆಯ ಚಿತ್ರಣವೇ ಬದಲಾಗಿಬಿಟ್ಟಿತು. ಅನಂತನ ಅಜ್ಜನ ಕಾಲದಲ್ಲಿ ಕಟ್ಟಿದ್ದ ಹಳೆಯ ಮನೆಗೆ ಕಾಯಕಲ್ಪವಾದಂತೆ ಮನೆಯ ಮೂಲೆಮೂಲೆಗಳೆಲ್ಲಾ ದೂಳು, ಬಲೆ, ಕಸ ಝಾಡಿಸಿಕೊಂಡು ಶುಭ್ರವಾದುವು. ಪಾತ್ರೆಪರಡಿಗಳು ಫಳಗುಟ್ಟಿದುವು. ಮನೆಯಂಗಳದಲ್ಲಿ ರಂಗೋಲಿ ಅರಳಿ, ಹೂತೋಟದಲ್ಲಿ ಹೂಗಿಡಗಳು ನಳನಳಿಸಿ, ಹಿತ್ತಲಲ್ಲಿ ಸೊಪ್ಪು, ತರಕಾರಿಗಳ ಸಮೃದ್ಧಿ. ತೋಟದಲ್ಲಿರಲಿ, ಗದ್ದೆಯಲ್ಲಿರಲಿ, ಹೆಂಡತಿಯನ್ನು ನೆನೆಸಿಕೊಂಡರೆ ಒಂದು ಕೈಯಲ್ಲಿ ಪೊರಕೆ, ಮತ್ತೊಂದು ಕೈಯಲ್ಲಿ ನೆಲ ವರೆಸುವ ಬಟ್ಟೆ ಹಿಡಿದ ಚಿತ್ರವೇ ಕಣ್ಣಿಗೆ ಕಟ್ಟುತ್ತದೆಯೆಂದು ಉತ್ಪ್ರೇಕ್ಷೆ ಮಾಡಿ ಹೇಳುತ್ತಿದ್ದ ಅನಂತ. 'ಹೇಗೋ ಒಂದು, ಏನೋ ಒಂದು...' ಎನ್ನುವಂತೆ ಅಟ್ಟು ಉಣ್ಣುವುದು ಅಭ್ಯಾಸವಾಗಿದ್ದವನಿಗೆ ಮಗ್ಗುಲಲ್ಲಿ ಕೂತು ಸೌಟು ತುಂಬಿ ಬಡಿಸುವ ಹೆಂಡತಿ ತಾಯಿಯ ನೆನಪನ್ನು ಕೆದಕುತ್ತಿದ್ದಳು. ಹಿರಿಯರೆನಿಸಿಕೊಂಡವರು ಯಾರಿಲ್ಲದ ಮನೆಯಲ್ಲಿ ಒಟ್ಟಿಗೆ ಕೂತು ಉಣ್ಣುವುದು ಗಂಡಹೆಂಡಿರಿಗೆ ಅಭ್ಯಾಸವಾಗಿತ್ತು. ಮಾಡಿದ ಪದಾರ್ಥಗಳನ್ನೆಲ್ಲಾ ಎಲೆಯೆದುರು ಜೋಡಿಸಿಡುತ್ತಿದ್ದಳು ನಳಿನಿ. ಒಟ್ಟಿಗೆ ಕೂತು ಉಣ್ಣುವುದಾದರೂ ಎಡಗೈಯಿಂದಲಾದರೂ ಸರಿ, ಗಂಡನಿಗೆ ಬಡಿಸುವುದು ನಳಿನಿಯ ಹಕ್ಕು. ಈ ಉಪಚಾರವನ್ನು ಮುಕ್ತಮನಸ್ಸಿನಿಂದ ಸ್ವೀಕರಿಸುತ್ತಿದ್ದ ಅನಂತ ಹೆಂಡತಿಯ ಎಲೆ ತುಂಬಿಸುವುದರಲ್ಲಿ ಹಿಂದೆ ಬೀಳುತ್ತಿರಲಿಲ್ಲ. ಮಾತು, ನಗು, ಸಂತೋಷ ಏನೆಲ್ಲವನ್ನೂ ಕಳೆದುಕೊಂಡಿದ್ದ ಮನೆ ನಳಿನಿಯ ಆಗಮನದೊಂದಿಗೆ ವಸಂತೋದಯವಾದಂತೆ ವರ್ಣರಂಜಿತವಾಗಿತ್ತು. ಬಾಯ್ಬಿಟ್ಟು ಈ ಮಾತು ಹೇಳುತ್ತಿದ್ದ ಅನಂತ,

"ನೀನು ಈ ಮನೆಗೆ ಬರದೇ ಇದ್ದಿದ್ರೆ ಬದುಕಲ್ಲಿ ಇಷ್ಟೆಲ್ಲಾ ಸುಖ, ಸಂತೋಷ ಇರುತ್ತೇಂತ ನಂಗೆ ಗೊತ್ತೇ ಆಗ್ತಿರ್ಲಿಲ್ಲ. ಸುಳ್ಳ್ಯಾಕೆ ಹೇಳ್ಲಿ ನಳಿನಿ, ನನ್ನ ಉದ್ಧಾರ ಮಾಡ್ಬಿಟ್ಟೆ ನೀನು..."